2002–2003			
ಲೆಕ್ಕ	674.46	806.49	(–) 132.03
2003–2004			
ಪರಿಷ್ಕೃತ ಅಂದಾಜು	972.45	918.07	(–) 54.38

ಖರ್ಚಾಗದೇ ಉಳಿಕೆಯಾದ ಮೊತ್ತವನ್ನು ತದನಂತರದ ವರ್ಷಗಳಲ್ಲಿ ಮರು ಸಿಂಧುತ್ವಗೊಳಿಸಿ ಬಳಸಲಾಗುವುದು.

ಇ) ಪ್ರಶ್ನೆ ಸಂಖ್ಯೆ (ಆ)ದಲ್ಲಿ ಸೂಚಿಸಿದಂತೆ, ಖರ್ಚಾಗದೇ ಉಳಿಕೆ ಆದ ಮೊತ್ತವನ್ನು ಮರು ಸಿಂಧುತ್ವಗೊಳಿಸಿ ಸದರಿ ಮೊತ್ತವನ್ನು ಯಾವ ಕಾರಣಕ್ಕಾಗಿ ಮಂಜೂರು ಮಾಡಲಾಗಿತ್ತೋ, ಅದೇ ಕಾರಣಕ್ಕಾಗಿ ಬಳಸಲಾಗುವುದು.

81 (1087) ಶ್ರೀ ಶಿವಾನಂದ ನಾಯಕ್ (ಭಟ್ಕಳ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮ್ಯಾಂಗನೀಸ್ ಖನಿಜ ಹೊತ್ತ ಹೆಚ್ಚು ಭಾರದ ಲಾರಿಗಳು ಶರಾವತಿ ಸೇತುವೆಯ ಮೇಲೆ ಅಕ್ರಮವಾಗಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಇದರಿಂದ ಸೇತುವೆಯ ಗುಣ ಸಾಮರ್ಥ್ಯಕ್ಕೆ ಧಕ್ಕೆ ಉಂಟಾಗುವುದಿಲ್ಲವೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ?

ಈ) ಇಂತಹ ಲಾರಿಗಳ ಸಾಗಾಣಿಕೆಗೆ ಸರ್ಕಾರ ಯಾವ ನಿರ್ಭಂಧಗಳನ್ನು ವಿಧಿಸಿದೆ?

ಉ) ಇಲ್ಲದಿದ್ದಲ್ಲಿ ಸದರಿ ಸೇತುವೆಗೆ ಹಾನಿ ಆಗುವುದೆಂದು ಸರ್ಕಾರ ಭಾವಿಸುವುದಿಲ್ಲವೇ?

ಊ) ಈ ಅಕ್ರಮ ಮ್ಯಾಂಗನೀಸ್ ಸಾಗಾಣಿಕೆ ತಡೆಗೆ ಯಾವ ಕ್ರಮ ಕೈಗೊಂಡಿದೆ? ವಿವರ ಒದಗಿಸುವುದು?

ಶ್ರೀ ಹೆಚ್. ಡಿ. ರೇವಣ್ಣ (ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಹೆಚ್ಚು ಭಾರದ ಮ್ಯಾಂಗನೀಸ್ ಲಾರಿಗಳು ಶರಾವತಿ ಸೇತುವೆ ಮೇಲೆ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಅತೀ ಭಾರದ ವಾಹನಗಳ ಓಡಾಟದಿಂದ ಸೇತುವೆ ಗುಣ ಸಾಮರ್ಥ್ಯಕ್ಕೆ ಧಕ್ಕೆ ಉಂಟಾಗುವ ಸಾಧ್ಯತೆಗಳಿವೆ.

ಇ) ಅತೀ ಭಾರದ ಮ್ಯಾಂಗನೀಸನ್ನು ಹೊತ್ತ ಲಾರಿಗಳ ಸಾಗಾಣಿಕೆಯನ್ನು ನಿಯಂತ್ರಿಸುವಂತೆ ಜಿಲ್ಲಾಧಿಕಾರಿಗಳು, ಜಿಲ್ಲಾ ವರಿಷ್ಟಾಧಿಕಾರಿಗಳು ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿದ್ದಾರೆ. ಇತ್ತೀಚೆಗೆ ಅತಿ ಭಾರದ ಮ್ಯಾಂಗನೀಸ್ ಹೊತ್ತ ಲಾರಿಗಳ ಸಾಗಾಣಿಕೆಯನ್ನು ಬಹುಮಟ್ಟಿಗೆ ನಿಯಂತ್ರಿಸಲಾಗಿದೆ.

ಈ) ದಿನಾಂಕ 4.7.96 ರ ಸಾರಿಗೆ ಇಲಾಖೆ ಅಧಿಸೂಚನೆಯಲ್ಲಿ ವಿವಿಧ ವರ್ಗದ ಲಾರಿಗಳಿಗೆ ತೂಕದ ಮಿತಿಯನ್ನು ಸೂಚಿಸಲಾಗಿದೆ.

ಉ) ಸದರಿ ಸೇತುವೆಗೆ ಹಾನಿ ಆಗುವುದೆಂಬ ಕಾರಣದಿಂದ ಅತೀ ಭಾರ ಹೊತ್ತ ಲಾರಿಗಳ ಸಾಗಾಟವನ್ನು ಸಾರಿಗೆ ಹಾಗೂ ಪೋಲೀಸ್ ಇಲಾಖೆ ಮುಖಾಂತರ ನಿಯಂತ್ರಿಸಲಾಗಿದೆ.

ಊ) ಪರಿಶೀಲನೆಯಲ್ಲಿರುತ್ತದೆ.